ದಿನಾಂಕ: 02-12-2016 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು: 1 ಮತ್ತು 4 ನೇ ಪ್ರತಿವಾದಿಯ ಪರ ಶ್ರೀ ವಿಬಿಪಿ ವಕೀಲರಿಂದ ,

ಮಹದೇವಪ್ಪನವರ ಜೊತೆಗೆ ಸ್ವತ್ತಿನ ವ್ಯವಹಾರವಾಗಿ ನನ್ನ ಹೆಂಡತಿಯಾದ 2 ನೇ ವಾದಿ ಶರಣಮ್ಮ ಅವರಿಂದ 5 ಲಕ್ಷ ರೂ.ಗಳ ಮುಂಗಡ ಹಣ ಪಡೆದಿದ್ದರು ಎಂದರೆ ಸರಿಯಲ್ಲ. ಸದರಿ ನೊಂದಾಯಿತ ಕ್ರಯದಕರಾರು ನಿಪಿ10ಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ10 ರ ವಿಕ್ರಯ ಕರಾರು ಪತ್ರದ ಮೂರನೇ ಪುಟ ಹಾಗೂ ಮೂರನೇ ಪುಟದ ಹಿಂದಿನ ಭಾಗದಲ್ಲಿ ಸಾಕ್ಷಿಯೆಂದಿರುವ ಪಂಪನಗೌಡರವರ ಸಹಿಯನ್ನು ಸಾಕ್ಷಿಗೆ ಮುಖಬೆಲೆ ಮಾಡಲಾಗಿದೆ ಅದು ತನ್ನ ಸಹಿಯೆಂದು ಸಾಕ್ಷಿ ಒಪ್ಪಿಕೊಂಡು ಅವುಗಳನ್ನು ನಿಪಿ10 (ಎ) ಹಾಗೂ ನಿಪಿ10 (ಬಿ) ಎಂದು ಗುರ್ತಿಲಾಯಿತು. ನನ್ನ ಹೆಂಡತಿ ನನಗೆ ನಿಪಿ52 ರಂತೆ ದಾನಪತ್ರ ಬರೆದುಕೊಡುವ ಸಮಯದಲ್ಲಿ ನಿಪಿ10 ಕ್ರಯದಕರಾರು ಪತ್ರ ರದ್ದಾಗಿತ್ತು . ನನ್ನ ಹೆಂಡತಿ ನನಗೆ 40 X 45 ವಿಸ್ತೀರ್ಣದ ಸ್ವತ್ತನ್ನು ದಾನ ಕೊಟ್ಟಿದ್ದಾರೆ. ನಂತರ ಆ ವಿಸ್ತೀರ್ಣ ತಿದ್ದುಪಡಿ ಮಾಡಿದ್ದಾರೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ . ದಾನಪತ್ರದಲ್ಲಿ ಖಾಲಿ ಜಾಗ ಎಂದು ಬರೆದಿರುವ ಅಂಶ ನಿಜವಾಗಿದೆ. ದಾನ ಕೊಟ್ಟ ನಂತರ ಮನೆ ಕಟ್ಟಲು ನಗರಸಭೆಯ ಲೈಸೆನ್ಸ್ ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ4 ರಿಂದ 7 ಫೋಟೋದಲ್ಲಿರುವವರು ನಾನು ಹಾಗೂ ಕರ್ನಾಟಕದ ಬ್ಯಾಂಕ್ ಮ್ಯಾನೇಜರ್ ಅಂದರೆ ಸರಿ . ಬ್ಯಾಂಕ್‌ನವರು ನನಗೆ ಸಾಲ ನೀಡಿಲ್ಲ. ನಾನು ಆದಾಯ ತೆರಿಗೆ ಕಟ್ಟುತ್ತಿಲ್ಲ. ನಿಪಿ4 ರಿಂದ 7 ರ ಫೋಟೋಗಳಲ್ಲಿರುವ ಮನೆ ನಾನು ಕಟ್ಟಿಲ್ಲ ಆದರೆ 2 ನೇ ಪ್ರತಿವಾದಿ ಸುಜಾತ ಕಟ್ಟಿದ್ದಾರೆ ಎಂದರಿ ಸರಿಯಲ್ಲ. ನಿಪಿ17 ತೆಲುಗಿನಲ್ಲಿದೆ ಎಂದರೆ ಸರಿ . ನಾನು ಅವಿಧ್ಯಾವಂತ. ನನಗೆ ತೆಲುಗು ಓದಲು ಹಾಗೂ ಬರೆಯಲು ಬರುವುದಿಲ್ಲ.

4 ನೇ ಪ್ರತಿವಾದಿ ಬಸವರಾಜ್ ನನಗೆ ಕಳೆದ 15 ವರ್ಷಗಳಿಂದ ಪರಿಚಯ. ನಾನು ಬಸವರಾಜ್‌ರವರ ಜೊತೆಗೆ ಯಾವುದೇ ವ್ಯವಹಾರ ಮಾಡಿಲ್ಲ. ಈ ದಾವೆಗೆ ಬಸವರಾಜ್‌ರವರು ಸಂಬಂಧ ಇಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಈಶ್ವರಮ್ಮ ನನಗೆ ಪರಿಚಯ. ನಿಪಿ53 ನಾನು ಈಶ್ವರಮ್ಮನವರಿಗೆ ಬರೆದುಕೊಟ್ಟ ಖರೀದಿ ಪತ್ರ ಎಂದರೆ ಸರಿ . ಅದಕ್ಕೆ ನನ್ನ ಹೆಂಡತಿಯು ಸಹಾ ಸಾಕ್ಷಿ ಹಾಕಿದ್ದಾರೆ ಎಂದರೆ ಸರಿ . ಈಶ್ವರಮ್ಮನವರಿಗೆ ಪತ್ರ ಬರೆದುಕೊಡುವಾಗಲೂ ಸಹಾ ಖಾಲಿ ಜಾಗ ಎಂದು ನಿಪಿ53 ರಂತೆ ನಾವು ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಈಶ್ವರಮ್ಮಳಿಗೂ ಸಹಾ 40 X 45 ಅಡಿ ವಿಸ್ತೀರ್ಣದ ಆಸ್ತಿಯನ್ನು ಬರೆದುಕೊಟ್ಟಿದ್ದೇವೆ ಎಂದರೆ ಸರಿ .

ಈಶ್ವರಮ್ಮ ದಾವಾ ಸ್ವತ್ತನ್ನು ಸುಜಾತರವರಿಗೆ ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಿಲ್ಲ. ಸುಜಾತರವರೇ ದಾವಾಸ್ತಿಯಲ್ಲಿ ಕಟ್ಟಡವನ್ನು ಕಟ್ಟಿ ಅದನ್ನು ಪೂರ್ಣಗೊಳಿಸಿ ಗೃಹಪ್ರವೇಶವನ್ನು ಸಹಾ ಅವರೇ ನೇರವೇರಿಸಿರುತ್ತಾರೆ. ನಿಪಿ30 ,31 35 , 36 , 38 , 39, 41 , 42 ,48, 50 ರಲ್ಲಿ ಅದನ್ನು ಬರೆದಿರುವ ಹೆಸರು ಹಾಗೂ ವಿಳಾಸ ಹಾಗೂ ಯಾವ ಉದ್ದೇಶಕ್ಕಾಗಿ ಬರೆದರು ನನಗೆ ಗೊತ್ತಿಲ್ಲ.

ಶ್ರೀದೇವಿಯವರು ಹಣದ ವಸೂಲಿಗಾಗಿ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ ನಂತರವೇ ಮಹದೇವಪ್ಪರವರಿಗಾಗಲೀ , ಈಶ್ವರಮ್ಮರವರಿಗಾಗಲೀ , ಸುಜಾತರವರಿಗಾಗಲೀ ಸ್ವತ್ತು ಮಾರಾಟ ಮಾಡಿದ ವಿಷಯ ನನಗೆ ಗೊತ್ತಾಯಿತು ಅದರ ಮುಂಚೆ ನನಗೆ ಗೊತ್ತಿರಲಿಲ್ಲ. ಜೆಎಂಎಫ್‌ಸಿ ನ್ಯಾಯಾಲಯದ ದಾವೆಯಲ್ಲಿ ಶ್ರೀದೇವಿಯವರು ದಾವಾ ಸ್ವತ್ತನ್ನು ಜಪ್ತಿ ಮಾಡಿಸಿದ್ದರು ಎಂದರೆ ಸರಿ. ಶ್ರೀದೇವಿ ದಾವಾ ಸಲ್ಲಿಸಿದ ಪ್ರಾಂಸರಿ ಪತ್ರಗಳಿಗೂ ಹಾಗೂ ಇಲ್ಲಿ ಹಾಜರುಪಡಿಸಿರುವ ನೊಂದಾಯಿತ ಖರೀದಿ ಪತ್ರಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಶ್ರೀದೇವಿ ಯಾರು ಎಂಬುವುದು ನನಗೆ ಗೊತ್ತಿಲ್ಲ ಎಂದು ಸ್ವತಃ ಉತ್ತರಿಸುತ್ತಾರೆ. ಶ್ರೀದೇವಿ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ದಾವಾ ಹಾಕಿದ ನಂತರ ಈ ನ್ಯಾಯಾಲಯದಲ್ಲಿ ನಾನು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ . ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನ ಇಲ್ಲ ಎಂದರೆ ಸರಿ . ನಾವು ಸ್ವಾಧೀನ ಯಾರಿಗೂ ಕೊಟ್ಟಿಲ್ಲ. ಖರೀದಿ ಪತ್ರದ ಪ್ರಕಾರ ಈಶ್ವರಮ್ಮನವರಿಗೆ ದಾವಾ ಸ್ವತ್ತಿನ ಸ್ವಾಧೀನವನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆ ನಿಪಿ53 ರಂತೆ ಇದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಸ್ವಾಧೀನದಲ್ಲಿ ಈಶ್ವರಮ್ಮ ಇದ್ದುದ್ದರಿಂದಲೇ ಅವರು ದಾವಾ ಸ್ವತ್ತನ್ನು ಸುಜಾತರವರಿಗೆ ಮಾರಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸುಜಾತರವರ ಹೆಸರಿನಲ್ಲಿ ಹಾಗೂ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ.

ಈಶ್ವರಮ್ಮ ಹಾಗೂ ಅವರ ಗಂಡ ನಮ್ಮ ಬಳಿ ಸಾಲ ಇಲ್ಲ ಎಂದು ಬೀಳೆ ಹಾಳೆಯಲ್ಲಿ ಬರೆದುಕೊಟ್ಟಿದ್ದಾರೆ . ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಈಶ್ವರಮ್ಮ ನಮಗೆ ಅಗ್ರಿಮೆಂಟ್ ಬರೆದುಕೊಟಿಲ್ಲ, ನಮಗೆ ಮೋಸ ಮಾಡಿದ್ದಾರೆಂದು ಸಾಕ್ಷಿ ಸ್ವತಃ ಉತ್ತರಿಸುತ್ತಾರೆ.

ದಾವಾ ಸ್ವತ್ತನ್ನು ನಾವು ಈಶ್ವರಮ್ಮನವರಿಗೆ ಖಂಡಿತ ಕ್ರಯಪತ್ರವನ್ನು ಬರೆದುಕೊಟ್ಟಿದ್ದೇವೆ ಹಾಗೂ ಹಣ ಪಡೆದಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರುತ್ತಾರೆ. ಕಾಲಾವಕಾಶ ನೀಡಲಾಯಿತು.

(ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಅದೆ ,

ಸಿನಿಯರ್ ಸಿವಿಲ್ ನ್ಯಾಯಾಧೀಶರು ,ಶಿರುಗುಪ್ಪ